3. ಮಳವಳ್ಳಿ ಟೌನ್ ಬಸ್ ನಿಲ್ದಾಣ ಕಟ್ಟಡದ ಕೆಲಸವನ್ನು ಜರೂರಾಗಿ ಪ್ರಾರಂಭಿಸುವುದು

ಶ್ರೀಮತಿ ಮಲ್ಲಾಜಮ್ಮ (ಮಳವಳ್ಳಿ) : ಮಾನ್ಯ ಉಪಾಧ್ಯಕ್ಷರೆ. ಮಳವಳ್ಳಿ ಟೌನ್‌ಗೆ ಈಗಾಗಲೇ ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣ ಮಂಜೂರಾಗಿದ್ದು ಗುದ್ದಲಿ ಪೂಜೆಯನ್ನು ಸಹ ಕಳೆದ 12-9-91ರಲ್ಲಿ ನೆರವೇರಿಸುತ್ತದೆ. ಇದುವರೆಗೂ ಟೆಂಡರ್ ಕರೆದಿರುವುದಿಲ್ಲ. ಕೂಡಲೇ ಟೆಂಡರನ್ನು ಕರೆದು ಬಸ್ ನಿಲ್ದಾಣದ ಕಟ್ಟಡದ ಕೆಲಸ ಅತಿ ಜರೂರಾಗಿ ಪ್ರಾರಂಭಿಸುವಂತೆ ಮಾನ್ಯ ಸಾರಿಗೆ ಸಚಿವರನ್ನು ಈ ಮೂಲಕ ಒತ್ತಾಯಿಸುತ್ತೇನೆ.

ಶ್ರೀ ಜಿ.ಎಚ್. ಆಶ್ವತ್ಥರೆಡ್ಡಿ (ಲೋಕೋಪಯೋಗಿ ಸಚಿವರು) : ಮಾನ್ಯ ಉಪಾಧ್ಯಕ್ಷರೆ. ಮಾನ್ಯ ಸಾರಿಗೆ ಸಚಿವರ ಪರವಾಗಿ ಈ ಉತ್ತರ ಕೊಡುತ್ತೇನೆ.

ಮಂಡ್ಯ ಜಿಲ್ಲೆ ಮಳವಳ್ಳಿ ಟೌನಿನಲ್ಲಿ ಬಸ್ ನಿಲ್ದಾಣ ನಿರ್ಮಾಣ ಮಾಡಲು ಸುಮಾರು 3 ಎಕರೆ 20 ಗುಂಟೆ ನಿವೇಶನವನ್ನು ದಿನಾಂಕ 10-5-91 ರಂದು ಪುರಸಭೆ ಮಳವಳ್ಳಿ ಇವರು ಸಂಸ್ಥೆಗೆ ವಹಿಸಿಕೊಟ್ಟಿರುತ್ತಾರೆ. ಬಸ್ ನಿಲ್ದಾಣ ನಿರ್ಮಾಣ ಮಾಡಲು 1991-92ರ ಕಾಮಗಾರಿ ಸಮಿತಿಯಲ್ಲಿ 10.00 ಲಕ್ಷ ರೂಪಾಯಿಗಳಿಗೆ ಒಪ್ಪಿಗೆ ನೀಡಲಾಗಿತ್ತು. ಈ ಬಸ್ ನಿಲ್ದಾಣಕ್ಕೆ ದಿನಾಂಕ 12-9-91 ರಂದು ಅಸ್ತಿಭಾರವನ್ನು ಹಾಕಲಾಗಿದೆ. ಆದರೆ ಮಳವಳ್ಳಿ ಟೌನಿಗೆ ಆಗಮಿಸುವ ಮತ್ತು ನಿರ್ಗಮಿಸುವ ಒಸ್ಸುಗಳ ಸಂಚಾರಕ್ಕೆ ಅನುಗುಣವಾಗಿ ದೊಡ್ಡ ನಿಲ್ದಾಣ ಕಟ್ಟಿಸಲು ಮಾನ್ಯ ಶಾಸಕಿಯವರ ಸಲಹೆಯಂತೆ ಸುಮಾರು15ಲಕ್ಷ ರೂಪಾಯಿಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಲಾಗುತ್ತಿದ್ದು, ಸಧ್ಯದಲ್ಲೇ ಮಂಜೂರಾತಿ ನೀಡಿ 1992-93ನೇ ಸಾಲಿನಲ್ಲಿ ಬಸ್ ನಿಲ್ದಾಣದ ನಿರ್ಮಾಣ ಕಾರ್ಯವನ್ನು ಕೈಗೊಳ್ಳಲಾಗುವುದು.

4. ಅರಣ್ಯ ಶಾಸ್ತ್ರ ಪದವೀಧರರಿಗೆ ಉದ್ಯೋಗವನ್ನು ಕಲ್ಪಿಸುವುದು

ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದ್ರಿ) : ಮಾನ್ಯ ಉಪಾಧ್ಯಕ್ಷರೆ, ಅರಣ್ಯ ಶಾಸ್ತ್ರ ಪದವಿ ವಿದ್ಯಾರ್ಥಿಗಳು ತಾವು ಅರಣ್ಯ ಶಾಸ್ತ್ರ ಪಠ್ಯಕ್ರಮದಲ್ಲಿ ಪದವಿಯನ್ನು ಪಡೆದಿರುವುದಾದರೂ ಈತನಕ ಅವರಿಗೆ ಯೋಗ್ಯವಾದ ಹುದ್ದೆಯನ್ನು ಪಡೆಯಲು ಅಸಾಧ್ಯವಾಗಿದೆ. ಅರಣ್ಯ ಇಲಾಖೆಯಲ್ಲಿ ಅವರಿಗೆ ಈ ತನಕ ಸಹ ಯಾವ ತರಹದ ಉದ್ಯೋಗದ ಅಸ್ಪದವನ್ನು ಕಲ್ಪಿಸಲಾಗಿಲ್ಲ. ರಾಜ್ಯದಲ್ಲಿ ಎರಡು ಅರಣ್ಯಶಾಸ್ತ್ರ ಕಾಲೇಜುಗಳಿದ್ದು ಮುಂದಿನ ವರ್ಷ ಹೊಸದೊಂದು ಕಾಲೇಜನ್ನು ಪುನಃ ತೆರೆಯುವ ನಿರ್ಧಾರ ಮಾಡಿದೆ. ಹೀಗಿರುವಾಗ ಈ ಕಾಲೇಜನಲ್ಲಿ ಕಲಿತು ಪರಿಣತರಾದ ವಿದ್ಯಾರ್ಥಿಗಳಿಗೆ ಅರಣ್ಯ ಇಲಾಖೆಯಲ್ಲಿ ಉದ್ಯೋಗ ಕಲ್ಪಿಸುವ ಅವಕಾಶವನ್ನು ಕಲ್ಪಿಸಬೇಕಾಗಿದೆ. ಆದುದರಿಂದ ಸರ್ಕಾರ ಈ ಕುರಿತು ಕೂಡಲೇ ಸೂಕ್ತ ಕ್ರಮವನ್ನು ಕೈಗೊಂಡು ನಿರುದ್ಯೋಗಿಯಾಗಿರುವ ಅರಣ್ಯ ಶಾಸ್ತ್ರ ಪದವೀಧರರ ರಕ್ಷಣೆಯನ್ನು ಮಾಡಬೇಕಾಗಿದ್ದು ಸರ್ಕಾರದ ಗಮನವನ್ನು ಸೆಳೆಯಬಯಸುತ್ತೇನೆ.

ಶ್ರೀ ಎಂ. ಬ್ಲೇಸಿಯಸ್ ಡಿಸೌಜ : ಮಾನ್ಯ ಉಪಾಧ್ಯಕ್ಷರೆ, ಸಂಬಂಧಪಟ್ಟ ಮಂತ್ರಿಗಳಿಗೆ ಹೇಳಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.